ವಾರದ ಪತ್ರ

## ಸುದ್ದಿಯ ನೈತಿಕತೆ

ನಮ್ಮ ಸುದ್ದಿ ವಾಹಿನಿಗಳ ಬಗ್ಗೆ ಬರೆದಷ್ಟೂ 'ಮತ್ತಷ್ಟು' ಎನ್ನುವಂತೆ ಉಳಿದಿರುತ್ತದೆ. ಯಾವುದೇ ರೂಪದ ಸುದ್ದಿ ಆಗಿದ್ದರೂ ಅದಕ್ಕೊಂದು ವಿಶಿಷ್ಟ ಧ್ವನಿತರಂಗವಿರುತ್ತದೆ. ಧನಾತ್ಮಕ ಸುದ್ದಿಯಾಗಿದ್ದರೂ ಅದನ್ನೇ ದೋಷಪೂರಿತ ಘಟನೆ ಎನ್ನುವಂತೆ ನಿರೂಪಿಸುತ್ತಾರೆ. ಮೊಸರಿನಲ್ಲಿ ಕಲ್ಲು ಹುಡುಕುವಂತೆ ಮೊಗೆಮೊಗೆದು ನೋಡುತ್ತಾರೆ. ಇಡೀ ದಿನ ಅದೇ ರಾಗ ಅದೇ ಪಾಡು. ಅಪರಾಧ ಸುದ್ದಿಗೆ ಸಂಬಂಧಿಸಿದಂತೆ ಪೊಲೀಸ್ ತನಿಖೆ ಮುಗಿಯುವ ಮುಂಚೆಯೇ ಇವರಿಗೆ ವಿವರಗಳು ಸಿಕ್ಕಿರುತ್ತವೆ. ಕೆಲಬಾರಿ ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳೇ ತನಿಖೆ ಮುಗಿಯುವ ಮುಂಚೆಯೇ ಹೇಗೆ ವಿವರವನ್ನು ನೀಡುತ್ತಾರೆ ಎಂಬ ನೈತಿಕ ಪ್ರಶ್ನೆ ಕಾಡುತ್ತದೆ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ವಿವೇಚನೆ ಇಲ್ಲದ ಕಥೆ

ವಿಚಿತ್ರ ಹೆಸರಿನ 'ಹಿಟ್ಲರ್ ಕಲ್ಯಾಣ' ಝೀ ಕನ್ನಡದ ಧಾರಾವಾಹಿ. ಅಲ್ಲೊಬ್ಬ ಶಿಸ್ತಿನ ಸಿಪಾಯಿ ಎಂಬ ಹೀರೊ. ಎಲ್ಲಾ ಧಾರಾವಾಹಿಗಳಲ್ಲೂ ಇರುವಂತೆ ಇಲ್ಲೂ ನಾಲ್ಕಾರು ಖಳ ನಾಯಕಿಯರು. ಅದರಲ್ಲಿ ನಾಯಕಿಯ ತಂದೆಯ ಮೇಲೆ ಅತ್ಯಾಚಾರದ ಆರೋಪ ಹೊರಿಸಿದ್ದಾರೆ. ಸಾಕಷ್ಟು ಅಪಮಾನ ಮಾಡಿ ಹಿಟ್ಲರ್ ಮನೆಯಿಂದ ಹೊರ ದಬ್ಬುತ್ತಾರೆ.

ಹೇಗೋ ನಾಯಕನಿಗೆ ನಿಜ ಗೊತ್ತಾಗಿ ನಾಯಕಿಯ ತಂದೆಯನ್ನು ವೇದಿಕೆಯ ಮೇಲೆ ಕರೆದು ಹಾರ ಹಾಕಿ ಸಭಿಕರ ಮುಂದೆ ನಿಲ್ಲಿಸುತ್ತಾನೆ. ಆಗ ಅಸ್ವಾಭಾವಿಕವಾಗಿ ಮಾತನಾಡುವ ನಾಯಕ, ಆರೋಪದ ಹಿಂದೆ ಯಾರಿದ್ದರು ಎಂದು ತಿಳಿದುಕೊಳ್ಳುವ ಗೋಜಿಗೂ ಹೋಗುವುದಿಲ್ಲ. ಅಂದರೆ ವಿವೇಚನೆ ಇಲ್ಲದೆ ಕಥೆಯನ್ನು ಹಿಗ್ಗಿಸಲಾಗುತ್ತಿದೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಅಸಹಜ ಉಡುಪುಗಳು

ಈ ಜಮಾನದ ಧಾರಾವಾಹಿ ಪಾತ್ರಧಾರಿಗಳ ವೇಷಭೂಷಣ ನೋಡಿದರೆ ಅಬ್ಬಾ! ಎನ್ನುವಂತಾಗುತ್ತದೆ. ಕಥೆಗೆ ಅವಶ್ಯಕತೆ ಇಲ್ಲದಿದ್ದರೂ ಆಡಂಬರಕ್ಕೆ ಒತ್ತು ನೀಡುತ್ತಿದ್ದಾರೆ ಎಂದು ಅನಿಸುತ್ತದೆ. ಕೆಲವೊಮ್ಮೆ ವೈಭವೋಪೇತ ದಿರಿಸು ಹಾಗೂ ಮೇಕಪ್ ಹಾಕುತ್ತಾರೆ. ನಿಜಕ್ಕೂ ಇದು ಅಸಹಜವೆನಿಸುತ್ತದೆ.

## ತಪ್ಪನ್ನು ಮರುಕಳಿಸಬಾರದು

ಚಂದನದ 'ಥಟ್ ಅಂತ ಹೇಳಿ' ಪ್ರಸಿದ್ಧ ರಸಪ್ರಶ್ನೆ ಕಾರ್ಯಕ್ರಮ ಎನ್ನುವುದರಲ್ಲಿ ಎರಡು ಮಾತಿಲ್ಲ. ಸ್ಪರ್ಧಿಗಳ ವೈಯಕ್ತಿಕ ವಿಭಾಗದ 'ಚಟ್ ಪಟ್' ಪ್ರಶ್ನಾವಳಿಯಲ್ಲಿ ನಿರೂಪಕರು ಸ್ಪರ್ಧಿಯೊಬ್ಬರಿಗೆ 'ಮಂಗಳ ಹಾಡು' ನುಡಿಗಟ್ಟಿನ ಅರ್ಥವನ್ನು ಕೇಳಿದರು. 'ಪರಿಸಮಾಪ್ತಿ ಮಾಡು' ಮತ್ತು 'ಕೊನೆಯ ಹಾಡನ್ನು ಹಾಡು' ಎಂಬ ಆಯ್ಕೆಗಳಿದ್ದವು. ಸ್ಪರ್ಧಿಯೊಬ್ಬರು 'ಪರಿಸಮಾಪ್ತಿ ಮಾಡು' ಎಂಬ ಸರಿ ಉತ್ತರ ನೀಡಿದರು. ಅದನ್ನು ಪರಿಗಣಿಸದೆ ನಿರೂಪಕರು 'ಕೊನೆಯ ಹಾಡನ್ನು ಹಾಡು' ಎಂಬ ತಪ್ಪು ಉತ್ತರವನ್ನೇ ಪರಿಗಣಿಸಿದ್ದು ಬೇಸರ ತರಿಸಿತು. ಓದುಗರೊಬ್ಬರು 'ಜಾಣರ ಪೆಟ್ಟಿಗೆ'ಯಲ್ಲಿ ಇದೇ ಕಾರ್ಯಕ್ರಮದ ತಪ್ಪು ಉತ್ತರಗಳ ಬಗ್ಗೆ ಧ್ವನಿಯೆತ್ತಿದ್ದರು. ಲಕ್ಷಾಂತರ ಜನರು ವೀಕ್ಷಿಸುವ ಇಂತಹ ಕಾರ್ಯಕ್ರಮಗಳಲ್ಲಿ ಇನ್ನು ಮುಂದಾದರೂ ಲೋಪ ಆಗದಹಾಗೆ ನಿರ್ವಹಿಸಿದರೆ ಒಳ್ಳೆಯದು.

—ಎಂ.ಜೆ. ಅಭಿಷೇಕ್, ಬೆಂಗಳೂರು

80—90ರ ದಶಕದ ಕನ್ನಡ ಸಿನಿಮಾ ಇತಿಹಾಸವನ್ನು ಅವಲೋಕಿಸಿದರೆ ಪಾತ್ರಧಾರಿಗಳ ವೇಷಭೂಷಣ ಆಯಾ ಪಾತ್ರಕ್ಕೆ ತಕ್ಕಂತೆ ಇರುತ್ತಿದ್ದವು. ಈ ಕಾಲದ ಬಹುಜನಪ್ರಿಯ ಮಾಧ್ಯಮ ಎನಿಸಿಕೊಂಡಿರುವ ಟೀವಿ ಕೂಡ ತನ್ನ ಕಥೆ ಹಾಗೂ ಸನ್ನಿವೇಶಕ್ಕೆ ತಕ್ಕಂತೆ ವಸ್ತ್ರವಿನ್ಯಾಸವನ್ನು ರೂಪಿಸಿದರೆ ಚೆನ್ನಾಗಿರುತ್ತದೆ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ಸೆನ್ಸಾರ್ ಬೇಡವೇ?

ಕಿರುತೆರೆಯಲ್ಲಿ ಸೆನ್ಸಾರ್ ಇಲ್ಲದೇ ಇರುವುದರಿಂದ ಕುಟುಂಬ ಸಹಿತ ಎಲ್ಲರೂ ಕೂತು ಟೀವಿ ನೋಡುವಂತೆ ಇಲ್ಲ. ಧಾರಾವಾಹಿಗಳಲ್ಲೂ ಅರೆಬರೆ ಬಟ್ಟೆ, ಮುಜುಗರ ಹುಟ್ಟಿಸುವ ರೊಮ್ಯಾಂಟಿಕ್ ದೃಶ್ಯಗಳ ಅವಶ್ಯಕತೆ ಇದೆಯೇ? ರಿಯಾಲಿಟಿ ಶೋಗಳಲ್ಲಂತೂ ಎಲ್ಲವೂ ಅತಿರೇಕವೇ.

—ಮೇಘನಾ ರಘುನಂದನ್, ಹೂವಿನಹಡಗಲಿ

## ಭುವನೇಶ್ವರಿಯ ಕಲ್ಯಾಣ

ಕಲರ್ಸ್ ಕನ್ನಡದ 'ಕನ್ನಡತಿ'ಯನ್ನು 'ಭುವನೇಶ್ವರಿಯ ಕಲ್ಯಾಣ' ಎಂದು ಬದಲಿಸಬೇಕೆಂದು ಆಡಿಕೊಳ್ಳುವಂತೆ ಆಗಿದೆ. ಆದರೂ ಭುವಿ ಮದುವೆ ಕುತೂಹಲದಿಂದ ಕೂಡಿದೆ. ಮದುವೆಯಲ್ಲಿನ ವಿಧಿವಿಧಾನಗಳು, ಮರೆತ ಸಾಂಪ್ರದಾಯಿಕ ಆಚರಣೆಗಳನ್ನು ನೆನಪಿಸುತ್ತಿವೆ.

ಹಳೆಯ ತಲೆಮಾರಿನವರಿಗೆ ನೆನಪಿನ ಬುತ್ತಿಯನ್ನು ಬಿಚ್ಚಿದರೆ, ಇಂದಿನವರಿಗೆ ಮದುವೆ ಅಂದರೆ ಹೀಗಾ? ಎಂದು ಆಶ್ಚರ್ಯ ವ್ಯಕ್ತಪಡಿಸುವಂತಿದೆ. ಮಾಂಗಲ್ಯಧಾರಣೆ, ಹಾರ ಬದಲಾಯಿಸುವುದು, ಸಪ್ತಪದಿ ಮತ್ತು ವಿವಾಹ ಹೋಮ – ಎಲ್ಲವನ್ನೂ ಒಂದೆರಡು ತಾಸಿನಲ್ಲಿ ಮುಗಿಸಿ, ಆರತಕ್ಷತೆ, ಭರ್ಜರಿ ಊಟಕ್ಕೆ ಮತ್ತು ಫೋಟೊ ಸಂಭ್ರಮಕ್ಕೆ ಮುನುಗ್ಗುವ ಈ ದಿನದ ಮದುವೆಗಳಿಗಿಂತಲೂ ಭುವಿ ಮದುವೆ ಭಿನ್ನವೆನ್ನಿಸಿತು.

—ರಮಾನಂದ ಶರ್ಮಾ, ನವದೆಹಲಿ

## ಹುಸಿಯಾಗುತ್ತಿದೆ ನಿರೀಕ್ಷೆ

ಸಿರಿ ಕನ್ನಡ ವಾಹಿನಿ 'ಯುಗಾಂತರ' ನಿರಾಸೆ ಮೂಡಿಸುತ್ತಿದೆ. ಸೇತುರಾಮ್ ಅವರ ಧಾರಾವಾಹಿ ಎಂಬ ನಿರೀಕ್ಷೆ ಹುಸಿಯಾಗುತ್ತಿದೆ. ನಿರ್ಭಾವುಕ ಪಾತ್ರಗಳು ಎತ್ತಲೋ ನೋಡುತ್ತ ಮಾತನಾಡುವ ಸನ್ನಿವೇಶಗಳು, ಶಿಥಿಲ ಕಥಾ ನಿರೂಪಣೆ ನೋಡುತ್ತಿದ್ದರೆ, ಸೇತುರಾಮ್ ಧಾರಾವಾಹಿಯೇ ಎಂಬ ಅನುಮಾನ ಮೂಡುತ್ತದೆ. ನಾಯಕಿ ದಿವ್ಯಾ ಕಾರಂತ್ ನಟನೆಯಲ್ಲಿ ತುಂಬಾ ಪಳಗಬೇಕು. ಕಥಾಹಂದರ ಸಾಕಷ್ಟು ಗಟ್ಟಿಯಾಗಬೇಕು.

—ಬಿಲ್ಲೇಶ್ವರ ಅಚ್ಚು, ಹುಂಚ

## ಭಾರಿ 'ಗೆರೆ ಬರೆ'

ಚಂದನದಲ್ಲಿ ವ್ಯಂಗ್ಯಚಿತ್ರ ರಚನೆಗೆ ಸಂಬಂಧಿಸಿದಂತೆ ರೂಪಿಸಿದ ಕಾರ್ಯಕ್ರಮ 'ಗೆರೆ ಬರೆ' ಒಂದು ಒಳ್ಳೆಯ ಪ್ರಯತ್ನ. ಯುವ ಪೀಳಿಗೆಗೆ ವ್ಯಂಗ್ಯಚಿತ್ರ ಕಲಾವಿದರನ್ನು ಪರಿಚಯಿಸುವ ಕಾರ್ಯಕ್ರಮ ಶ್ಲಾಘನೀಯ. ಸಮಾಜದ ಓರೆಕೋರೆಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸಲು ಕಾರ್ಟೂನಿಸ್ಟ್‌ಗಳು ಶ್ರಮಿಸುತ್ತಾರೆ. ಈ ನಿಟ್ಟಿನಲ್ಲಿ ಅವರ ಕೊಡುಗೆ ವಿಶೇಷವಾದುದು. ಕೆಲವರು ಇದನ್ನೇ ವೃತ್ತಿಯಾಗಿ ಮಾಡಿಕೊಂಡಿದ್ದಾರೆ. ಪತ್ರಿಕೆಗಳಲ್ಲಿನ ವ್ಯಂಗ್ಯಚಿತ್ರಗಳು ಕಚಗುಳಿ ಇಡುತ್ತಿದ್ದವು. ಅವುಗಳ ಸಂಖ್ಯೆ ಈಗ ಗಣನೀಯವಾಗಿ ಕಡಿಮೆಯಾಗಿದೆ. ಕಾರ್ಟೂನ್ ಕಲೆಯ ಬೆಳವಣಿಗೆಯ ನಿಟ್ಟಿನಲ್ಲಿ ದೂರದರ್ಶನದ 'ಗೆರೆ ಬರೆ' ಒಂದು ಉತ್ತಮ ಕಾರ್ಯಕ್ರಮ.

—ಸಿಹಿಮೊಗೆ ರಮೇಶ್, ಮೈಸೂರು

## ಶಾಲಿನಿ ನಿರೂಪಣೆ 'ಸೂಪರ್'

ಕಿರುತೆರೆಯ ಬಹುತೇಕ ರಿಯಾಲಿಟಿ ಶೋಗಳಲ್ಲಿ ನಿರೂಪಕರು ಅನಗತ್ಯವಾಗಿ ಅರಚುತ್ತಾ, ಬೇಕಿಲ್ಲದ ತಮಾಷೆ ಮಾಡುವುದೂ ಇದೆ. ಸ್ಟಾರ್ ಸುವರ್ಣದ 'ಸೂಪರ್ ಸ್ಟಾರ್—2' ಈ ಆರೋಪಕ್ಕೆ ಹೊರತಾಗಿದೆ.

ನಿರೂಪಣೆಯನ್ನು ಶಾಲಿನಿ ಸರಳವಾಗಿ ನಿರ್ವಹಿಸುತ್ತಿದ್ದಾರೆ. ನೃತ್ಯ—ತಮಾಷೆ ಜೊತೆ ಕಾರ್ಯಕ್ರಮವೂ ತುಂಬಾ ಚೆನ್ನಾಗಿ ನಡೆಸಿಕೊಡುತ್ತಾರೆ. ಮಹಿಳೆಯರ ಸಮಸ್ಯೆಗಳನ್ನು ತಾಳ್ಮೆಯಿಂದ ಕೇಳಿಸಿಕೊಂಡು ಸಮಾಧಾನ ಹೇಳುತ್ತಾರೆ. ಹೀಗೆ ಈ ಕಾರ್ಯಕ್ರಮ ಮುಂದುವರೆಯಲಿ.

—ಎನ್. ವೈದೇಹಿ, ಮೈಸೂರು